# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ :
**No.** ಬೆಂ.ಅ.ಪ್ರಾ/ನಮ/ಅ.ಸ/ಅ.ಅ-5/ತಾ.ಸ-2/ಪೂ/09/2026-27

ದಿನಾಂಕ :
**Date :** 15.05.2026

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ:4.1)
**ನಕ್ಷೆ ಮಂಜೂರಾತಿ ಪತ್ರ**

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಶ್ರೀಮತಿ/ಶ್ರೀ

**M/s Nambiar Ensembleresidential Projects LLP.**
**2nd Floor, PR Business Centre,**
**Above Croma, Outer Ring Road**
**Kadubeesanahalli, Marathahalli**
**Bangalore-560 103.**

ಮಾನ್ಯರೆ,

ಅರ್ಜಿದಾರರಾದ ತಾವು ದಿನಾಂಕ: 02.05.2026 & 04.05.2026 ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ದೊಮ್ಮಸಂದ್ರ ಗ್ರಾಮದ ಸರ್ವೆ ನಂ. 145/2, 145/3, 146/3, 146/5, 146/6, 146/7, 147/1, 147/9, 155/1, 155/2, 155/3, 155/4, 156/1, 156/4, 157/6, 161/2, 162/1, 162/2, 163/1, 163/2, 163/3, 163/4, 163/5, 163/6, 164/1, 164/2, 164/3, 167/2, 167/3, 171/1, 171/3, 171/4, 172/1, 172/2, 172/3, 250/1 (ಭಾಗ), 250/3(ಭಾಗ), 251/1, 251/2, 251/3, 252/1, 252/2, 252/3, 253/1, 253/2, 253/3, 253/4 ಮತ್ತು 253/5 ರಲ್ಲಿ ಒಟ್ಟು 63ಎಕರೆ 30.12ಗುಂಟೆ ಪ್ರದೇಶದಲ್ಲಿ ಫೇಸ್-3 ರ ಬ್ಲಾಕ್-ಸಿ ರಲ್ಲಿ ಟವರ್-13, 14 ಮತ್ತು ಬ್ಲಾಕ್-ಡಿ ರಲ್ಲಿ 15, 16, 17, 18, 19, 20 ಗಳ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಕೋರಿರುತ್ತೀರಿ,

ಬಹುಮಹಡಿ ವಸತಿ ಘಟಕಗಳ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಮಾನ್ಯ ಅಭಿಯಂತರ ಸದಸ್ಯರವರ ಕಛೇರಿ ಆದೇಶ ಸಂಖ್ಯೆ.190, ದಿನಾಂಕ: 14.05.2026 ರಂದು ಅನುಮೋದನೆ ನೀಡಿದ್ದು, ನಕ್ಷೆ ಮಂಜೂರಾತಿ ಶುಲ್ಕಗಳನ್ನು ಚಲನ್ ಸಂಖ್ಯೆ: **GN26051290**, ದಿನಾಂಕ: 15.05.2026 ರಂದು ಒಟ್ಟು ರೂ. 9,94,43,200/- ಗಳನ್ನು ಪಾವತಿಸಲಾಗಿರುತ್ತದೆ.

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಅದರಂತೆ ದಿನಾಂಕ: 15.05.2026 ರಂದು ಕೆಳಗೆ ವಿವರಿಸಿರುವ ಷರತ್ತುಗೊಳಪಡಿಸಿ, ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ಕಟ್ಟಡದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಗ್ರಾಮ | ಸರ್ವೆ ನಂ. | ಬ್ಲಾಕ್ (ಫೇಸ್-3) | ಟವರ್ | ಅಂತಸ್ತು | ಎತ್ತರ | ಉದ್ದೇಶ | ಘಟಕ |
|---|---|---|---|---|---|---|---|
| ದೊಮ್ಮಸಂದ್ರ | 145/2, 145/3, 146/3, 146/5, 146/6, 146/7, 147/1, 147/9, 155/1, 155/2, 155/3, 155/4, 156/1, 156/4, 157/6, 161/2, 162/1, 162/2, 163/1, 163/2, 163/3, 163/4, 163/5, 163/6, 164/1, 164/2, 164/3, 167/2, 167/3, 171/1, 171/3, 171/4, 172/1, 172/2, 172/3, 250/1 (ಭಾಗ), 250/3(ಭಾಗ), 251/1, 251/2, 251/3, 252/1, 252/2, 252/3, 253/1, 253/2, 253/3, 253/4 ಮತ್ತು 253/5 | ಬ್ಲಾಕ್-ಎ | ಟವರ್-13 | 3BF+GF+36UF | 114.15ಮೀ | ವಸತಿ | 142 |
| | | | ಟವರ್-14 | 3BF+GF+36UF | 114.15ಮೀ | ವಸತಿ | 142 |
| | | ಬ್ಲಾಕ್-ಬಿ | ಟವರ್-15 | 3BF+GF+38UF | 119.55ಮೀ | ವಸತಿ | 152 |
| | | | ಟವರ್-16 | 3BF+GF+38UF | 119.55ಮೀ | ವಸತಿ | 152 |
| | | | ಟವರ್-17 | 3BF+GF+38UF | 119.55ಮೀ | ವಸತಿ | 152 |
| | | | ಟವರ್-18 | 3BF+GF+38UF | 119.55ಮೀ | ವಸತಿ | 152 |
| | | | ಟವರ್-19 | 3BF+GF+38UF | 119.55ಮೀ | ವಸತಿ | 155 |
| | | | ಟವರ್-20 | 3BF+GF+38UF | 119.55ಮೀ | ವಸತಿ | 155 |
| | | | | | | ಒಟ್ಟು | 1202 |

ಮೇಲ್ಕಂಡ ಕಟ್ಟಡಕ್ಕೆ ನೀಡಿರುವ ನಕ್ಷೆ ಮಂಜೂರಾತಿಯು ದಿನಾಂಕ: 15.05.2026 ರಿಂದ ದಿನಾಂಕ: 14.05.2028 ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ.

ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ನೀಡಲಾಗಿದೆ ಎಂದು ಈ ಮೂಲಕ ತಿಳಿಯಪಡಿಸಿದೆ.

## -:ಷರತ್ತುಗಳು:-

1) ಪ್ರಾಧಿಕಾರದ ಸಮಿತಿ ಸಭೆಯ ಠರಾವು ಸಂಖ್ಯೆ: 1.152/2026, ದಿನಾಂಕ: **10.03.2026** ರಲ್ಲಿ ಅನುಮೋದಿಸಲಾಗಿದ್ದು, ಅದರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ: **ಬೆಂ.ಅ.ಪ್ರಾ/ನಯೋಸ/DLP-31/2023-24/439/2026-27**, ದಿನಾಂಕ: **30.04.2026** ರಲ್ಲಿ ಮಾರ್ಪಾಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ನೀಡಲಾಗಿದ್ದು, ಸದರಿ ಕಾರ್ಯಾದೇಶದಲ್ಲಿನ ಷರತ್ತುಗಳ ಕ್ರಮ ಸಂಖ್ಯೆ: 01 ರಿಂದ 26 ರವರೆಗೆ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2) ರಾಜ್ಯಮಟ್ಟ ಪರಿಸರ ಆಘಾತ ನಿರ್ಧಾರಣ ಪ್ರಾಧಿಕಾರ ಮಂಡಳಿ ರವರಿಂದ ಪಡೆದಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ SEIAA 99 CON 2023, dated. 30.11.2023 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
3) BSNL ಇಲಾಖೆಯವರಿಂದ ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ ಸಂಖ್ಯೆ DGM(CM)BGTD/NOC for high rise/2024-25/221 dated 02.12.2024 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
4) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡುವ ನಿರಾಕ್ಷೇಪಣಾ ಪತ್ರ ಸಂಖ್ಯೆ CTE-347261, PCB ID-248075, INW ID-279645, ದಿನಾಂಕ 27.01.2025 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
5) ವಾಯುಯಾನ ಇಲಾಖೆರವರಿಂದ ಪಡೆದಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ. HOSU/SOUTH/B/120322/729600, dated.30.01.2023 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
6) ನೀರು ಸರಬರಾಜುಗೆ ಸಂಬಂಧಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಮ್ಮಸಂದ್ರ ಗ್ರಾಮ ಪಂಚಾಯಿತಿ ಕಾರ್ಯಾಲಯ, ರವರು ದಿನಾಂಕ 24.10.2024 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.

ಪುಟ ಸಂಖ್ಯೆ: 3 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

7) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರಿಂದ ನಿರಾಕ್ಷೇಪಣಾ ಪತ್ರ ಸಂಖ್ಯೆ CEBRZ/SEO/AEE-1/2024-25/3508-11, dated.06.09.2024 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.

8) HAL ಇಲಾಖೆಯಿಂದ ಪಡೆದಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ ASC/DGM(AO)/131/HAL-BG-183-24/327/2025, Dated.29.03.2025 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.

9) ಅಗ್ನಿಶಾಮಕ ಇಲಾಖೆ (Karnataka State Fire & Emergency Services) ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ.KSFES/GBC(1)/178, Docket No. KSFES/ NOC/178/2026, ದಿನಾಂಕ.12.05.2026 ಅನ್ನು ನೀಡಿರುತ್ತಾರೆ.

10) ಕಟ್ಟಡದ ಕಾಮಗಾರಿಯ ಆರ್.ಸಿ.ಸಿ ಕಂಬಗಳು ನೆಲಮಟ್ಟಕ್ಕೆ ಎತ್ತರಿಸಿದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

11) ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ಯಾವ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲು ಜಾಗ, ರಸ್ತೆಗಳು, ಸರ್ಫೇಸ್ ಪಾರ್ಕಿಂಗ್ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವಂತಿಲ್ಲ.

12) ಪ್ರಾಧಿಕಾರದಿಂದ ಮಂಜೂರಾದ ಕಟ್ಟಡ ನಕ್ಷೆಯಂತೆಯೇ ಉದ್ದೇಶಿತ ಕಟ್ಟಡಕ್ಕೆ ನಡುಜಾಗಗಳನ್ನು ಬಿಟ್ಟು ಯಾವುದೇ ಉಲ್ಲಂಘನೆ ಮಾಡದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವ ಷರತ್ತಿಗೊಳಪಡಿಸಿದೆ. ತಪ್ಪಿದಲ್ಲಿ ಮಂಜೂರಾದ ನಕ್ಷೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

13) ಬಂಡಿದಾರಿ/ರಾಜಕಾಲುವೆ/ಮಳೆನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದಲ್ಲಿ ಆ ಪ್ರದೇಶವನ್ನು ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.

14) ಕಟ್ಟಡ ನಿರ್ಮಾಣ ಸಮಯದಲ್ಲಿ ಸುತ್ತಮುತ್ತಲಿನ ಪ್ರದೇಶಕ್ಕೆ ಅನಗತ್ಯ ಶಬ್ದ ಮಾಲಿನ್ಯ ತಡೆಗಟ್ಟುವ ಸಂಬಂಧ ನಿರ್ಮಾಣದ ಹೊರಭಾಗಗಳಿಗೆ ಅಗತ್ಯ ರಕ್ಷಣಾ ಕವಚವನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

15) ಅರ್ಜಿದಾರರು ಪ್ರಶ್ನಿತ ಪ್ರದೇಶದಲ್ಲಿ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.

16) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಸ್ವಾಧೀನಾನುಭವ ಪತ್ರ (Occupation Certificate) ಪಡೆಯುವ ನಿಮ್ಮ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

17) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.

18) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ/ಸ್ಥಳೀಯ ಪಂಚಾಯಿತಿ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.

19) ಯೋಜನೆಯಲ್ಲಿ ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಾಗಿ ಅಳವಡಿಸುವುದು.

20) ಅರ್ಜಿದಾರರು ಕಟ್ಟಡಕ್ಕೆ ನಿಯಮಾನುಸಾರ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

21) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.

22) ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.

ಪುಟ ಸಂಖ್ಯೆ: 4 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

23) ಅಭಿವೃದ್ಧಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB) ಸ್ಥಳೀಯ ಪ್ರಾಧಿಕಾರ/ನಿಗಧಿಪಡಿಸಿದ ಹಣವನ್ನು ಸಂದಾಯ ಮಾಡಿ ನಿರ್ವಹಿಸುವುದು.

24) ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿನ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

25) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Dry waste ಮತ್ತು Wet waste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

26) ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ಇಲಾಖೆಗಳಿಂದ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

27) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB)/ಸ್ಥಳೀಯ ಗ್ರಾಮ ಪಂಚಾಯಿತಿಯನ್ನು ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.

28) ಅಭಿವೃದ್ಧಿದಾರರು ವಿದ್ಯುತ್ ಶಕ್ತಿ ಟ್ರಾನ್ಸ್ ಫಾರ್ಮರ್ ಗಳನ್ನು ಮಂಜೂರಾದ ನಕ್ಷೆಯಲ್ಲಿ ತೋರಿಸಿದಂತೆ ಮೀಸಲಿರಿಸಿದ ಜಾಗದಲ್ಲಿಯೇ ಅದನ್ನು ಸ್ಥಾಪಿಸುವುದು.

29) ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಂಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

30) ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ. ಆದುದರಿಂದ ನಿರ್ಮಾಣ ಸಮಯದಲ್ಲಿ ಎಲ್ಲಾ ಜಾಗೃತ / ಸುರಕ್ಷಿತ ಕ್ರಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳತಕ್ಕದ್ದು.

31) ಪ್ರಶ್ನಿತ ಪ್ರದೇಶದಲ್ಲಿ 240.0ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿ ಗಿಡ, ಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು.

32) ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

33) ಪ್ರಸ್ತಾಪಿತ ಪ್ರದೇಶದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಮತ್ತು ಬಯಲು ಜಾಗಗಳ ಪ್ರದೇಶವನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸುವುದು.

34) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣದ ಸಂಖ್ಯೆ Civil Appeal No 14604/2024 ರಲ್ಲಿ ದಿನಾಂಕ 17.12.2024 ರಂದು ನೀಡಿರುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

35) ಪ್ರಾಧಿಕಾರಕ್ಕೆ /ಸರ್ಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುವ ಉದ್ಯಾನವನ /ಸಿ.ಎ. ನಿವೇಶನ /ಬಯಲು ಜಾಗಗಳಲ್ಲಿ ಪ್ರಾಧಿಕಾರಕ್ಕೆ /ಸರ್ಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿದೆ ಎಂಬ ನಾಮಫಲಕವನ್ನು ಅಳವಡಿಸತಕ್ಕದ್ದು.

36) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾಪ್ರತಿಯನ್ನು ಕಾರ್ಯಪಾಲಕ ಅಭಿಯಂತರು, ಪೂರ್ವ ವಿಭಾಗ, ನಗರಾಭಿವೃದ್ಧಿಭವನ, KUIDFC, ಇಂದಿರಾನಗರ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.